

ಲಂಡನ್ ಮಹಾನಗರದ ಆಕರ್ಷಣೆಗಳಲ್ಲೊಂದಾದ 'ರಿಚ್ಮಂಡ್ ಪಾರ್ಕ್' ಎರಡೂವರೆ ಸಾವಿರ ಎಕರೆಗಳಷ್ಟು ವಿಸ್ತೀರ್ಣವಾದುದು. ಹಸಿರುಸಿರಿಯ ನಿಸರ್ಗ ಸೌಂದರ್ಯದ ಜೊತೆಗೆ ಆಧುನಿಕ ನಿರ್ಮಾಣಗಳೂ ಸೇರಿಕೊಂಡಿರುವ, ನಡೆದು ನೋಡುವುದು ಕಷ್ಟವಾದ ಈ ಪಾರ್ಕ್‌ನ ಉದ್ದಗಲಕ್ಕೂ ಚಾರಿತ್ರಿಕ ಕಥನಗಳೇ ಪಿಸುಗುಟ್ಟುವುದು ವಿಶೇಷ.

■ ಡಾ. ಪ್ರೇಮಲತ ಬಿ.

ರಿಚ್ಮಂಡ್ ಪಾರ್ಕ್‌ನ ಚೆಲುವನ್ನು ಹೆಚ್ಚಿಸಿರುವ ಓಕ್ ಮರಗಳ ಸಾಲು



ಚಟುವಟಿಕೆಗಳ ನಗರವೊಂದರಲ್ಲೇ ಸುಮಾರು 5000 ಎಕರೆಗಳಷ್ಟು ಜಾಗವನ್ನು ರಾಜಮನೆತನಕ್ಕೆ ಸಂಬಂಧವಿರುವ ರಾಯಲ್ ಪಾರ್ಕ್‌ಗಳನ್ನಾಗಿ ಉಳಿಸಿಕೊಂಡಿದ್ದಾರೆ ಎಂದರೆ ಆಶ್ಚರ್ಯವಾಗದಿರಲು ಸಾಧ್ಯವೇ?

ಲಂಡನ್ ನಗರಿಯಲ್ಲೇ ಒಟ್ಟು ಎಂಟು ರಾಯಲ್ ಪಾರ್ಕುಗಳಿವೆ. ಹೈಡ್ ಪಾರ್ಕ್, ಕೆನ್ಸಿಂಗ್ಟನ್ ಗಾರ್ಡನ್, ಬುಶಿ ಪಾರ್ಕ್, ಸೇಂಟ್ ಜೇಮ್ಸ್ ಪಾರ್ಕ್, ಗ್ರೀನ್ ಪಾರ್ಕ್, ರೀಜೆಂಟ್ಸ್ ಪಾರ್ಕ್, ಗ್ರೀನಿಕ್ ಪಾರ್ಕ್ ಮತ್ತು ರೀಜೆಂಟ್ಸ್ ಪಾರ್ಕ್ – ಈ ಎಂಟು ಪಾರ್ಕುಗಳು. ಇವೆಲ್ಲ ರಾಜಮನೆತನಕ್ಕೆ ಸೇರಿದ ಉದ್ಯಾನವನಗಳು. ಇವುಗಳಲ್ಲಿ ಅತಿ ದೊಡ್ಡ ಉದ್ಯಾನವನ ಎಂದರೆ ಅದು ರಿಚ್ಮಂಡ್ ಪಾರ್ಕ್. ಇದು ಎಷ್ಟು ದೊಡ್ಡದೆಂದರೆ, ಮಿಕ್ಕ ಏಳು ಪಾರ್ಕ್‌ಗಳನ್ನೂ ಒಟ್ಟಿಗೆ ಇಡಬಹುದಾದಷ್ಟು